ಆರಾಧ್ಯ ತಾನು ಗೆದ್ದೆ ಅನಿಸಿದ್ದರೂ ಮನಸ್ಸು ಖಾಲಿಖಾಲಿ ಭಾವ ಅನುಭವಿಸಿತ್ತು. ಅದನ್ನೇ ಸೋಗಿನಲ್ಲಿ ಮತ್ತು ಪ್ರಣತಿಯನ್ನು ಒಪ್ಪಿಸಿದ ಸುಪ್ತ ಖುಷಿಯಲ್ಲಿ ತಾನು ಖಾಲಿಯಾದೆ ನಿನ್ನೆದುರು ಎಂದು ಸುಳ್ಳುಸುಳ್ಳೇ ಹೇಳಿ ಮೆಚ್ಚುಗೆ ಪಡೆಯಲು ಆ ಹೆಸರು ಇಟ್ಟುಕೊಂಡದ್ದು ಅವನು. ಅದು ಪ್ರಣತಿಗೆ ವಿನಯದಂತೆ ಕಾಣಬೇಕು ಮತ್ತು ತನ್ನ ಅರಿವನ್ನು ಅದು ಬಿಚ್ಚಿಡಬೇಕು- ಎರಡೂ ಭಾವಗಳು ಆರಾಧ್ಯನ ಮನಸ್ಸಿನಲ್ಲಿ ಸುಳಿದಾಡುತ್ತಿದ್ದವು.

ಮದುವೆಗಿಂತ ಮುಂಚೆ ಒಂದಿಷ್ಟು ದುಡಿದು ಸೇವ್ ಮಾಡಿಟ್ಟುಕೊಳ್ಳೋಣ ಎಂದು ಖಾಲಿಕೊಡ ಸುಳ್ಳುಸುಳ್ಳೇ ಬಸವಣ್ಣನ ತತ್ವವನ್ನು ಪ್ರಣತಿ ಎದುರು ಹೇಳಿ ಅವಳನ್ನು ಅಣಿಮಾಡುವ ನಿಟ್ಟಿನ ಹಿಂದೆ ದುಡ್ಡಿನ ಶುದ್ಧ ಲೆಕ್ಕಾಚಾರ ಇತ್ತು. ಇದು ಪ್ರಣತಿಗೆ ತಿಳಿಯಲಾರದು ಎನ್ನುವ ಖಾತ್ರಿಯಲ್ಲೇ ಈ ತಂತ್ರವನ್ನು ಹೆಣೆದಿದ್ದ. ಇಬ್ಬರೂ ಇಪ್ಪತ್ತೆರಡು ಸಾವಿರದ ಸಂಬಳದ ಕೆಲಸಕ್ಕೆ ಬೇರೆಬೇರೆ ಕಾಲೇಜು ಸೇರಿದ್ದರು. ಪ್ರಣತಿ ಖುಷಿಯಿಂದ ಪಾಠಕ್ಕೆ ಅಣಿಯಾಗಿ ಹೋಗಿ ನೆಟ್ಟಗೆ ಕಾಗುಣಿತ ಬರೆಯಲು ಬಾರದ ಮಕ್ಕಳ ಎದುರು ತೀರಾ ತಾತ್ವಿಕವಾಗಿ ಪಾಠ ಮಾಡಿ ಅವರೆಲ್ಲರಿಗೆ ಗಾಬರಿ ಹುಟ್ಟಿಸಿದ್ದಳು. ಫೀಡ್‌ಬ್ಯಾಕ್‌ನಲ್ಲಿ ಇದು ಗೊತ್ತಾಗಿ ನಕ್ಕು ತನ್ನ ಪಾಠದ ಜಾಡು ಬದಲಿಸಿಕೊಳ್ಳುತ್ತ ತಾನು ಮುಂದೆ ಹೀಗೇ ಸಾಗಿದರೆ ಸಾಹಿತ್ಯ ಗ್ರಹಿಕೆಯ ನಿಟ್ಟಿನಲ್ಲಿ ಪೇಲವವಾಗಬಹುದೆ ಎಂದು ಕೇಳಿಕೊಳ್ಳಲು ಆರಂಭಿಸಿದ್ದಳು. ತನ್ನ ಸಂಕಟ ಡಿಪಾರ್ಟ್ಮೆಂಟಿನಲ್ಲಿ ಇತರರದೂ ಆಗಿರಬಹುದೆ ಎಂದು ಯೋಚಿಸಲು ಆರಂಭಿಸಿ ಅವರೆಲ್ಲರನ್ನು ನೋಡಿದಾಗ ಮತ್ತಷ್ಟು ಗಾಬರಿಯಾಗಿತ್ತು. ಕೆಲವರಲ್ಲಿ ಸೂಕ್ಷ್ಮತೆಯೇನೊ ಇತ್ತು; ಆದರೆ ಅವರು ತೀರಾ ದಣಿದು ಬಾಯಿ ಬಂದ್ ಮಾಡಿಕೊಂಡಿದ್ದರು. ಯಾವುದಕ್ಕೂ ಅವರಲ್ಲಿ ಚಕಾರವಿರಲಿಲ್ಲ. ಮಿಕ್ಕವರದು ಪೊಳ್ಳು ಆರ್ಭಟ ಮತ್ತು ಸೋಗು. ಸಾಹಿತ್ಯ ಎನ್ನುವುದು ಅವರಲ್ಲಿ ದಿವಂಗತವಾಗಿ ಕಾಲವಾಗಿತ್ತು. ಇಷ್ಟಾದರೂ ಪ್ರೋಗ್ರಾಂ ಮಾಡುತ್ತ, ಫೋಟೊಗಳಿಗೆ ಪೋಸು ಕೊಡುತ್ತ ಎಲ್ಲೆಲ್ಲಿ ತಾನು ಕಡ್ಡಾಯವಾಗಿ ಕಾಣಿಸಿಕೊಳ್ಳಬೇಕು ಎಂಬ ಲೆಕ್ಕಾಚಾರದಲ್ಲಿ ಎಲ್ಲರನ್ನೂ ಯಾಮಾರಿಸಿಕೊಂಡೇ ಕಾಲದೂಡುತ್ತಿದ್ದವರನ್ನು ಕಂಡು ಪ್ರಣತಿ ಮೊದಲು ಒಳಗೊಳಗೇ ನಗುತ್ತಿದ್ದವಳು ಬರಬರುತ್ತ ಇದ್ಯಾಕೋ ರೇಜಿಗೆ ಹುಟ್ಟಿಸುತ್ತಿದೆಯಲ್ಲ ಅಂದುಕೊಳ್ಳಲು ಆರಂಭಿಸಿದ್ದಳು.



ಮತ್ತೊಂದು ಕಡೆ ಖಾಲಿಕೊಡ, ಡಿಆರ್‌ಎನ್ ಅವರ ಪ್ರಖರ ತಾತ್ವಿಕತೆ ಮರೆತು ಸಂಸಾರ ಕಟ್ಟಿಕೊಂಡ ಮೇಲೆ ತಗುಲಬಹುದಾದ ವೆಚ್ಚದ ಸ್ಟ್ಯಾಟಿಸ್ಟಿಕ್ಸ್ ಬಗ್ಗೆ ವಿದ್ಯಾರ್ಥಿಗಳಿಗೆ ಪಾಠ ಮಾಡಲು ಆರಂಭಿಸಿದ್ದ. ಮದುವೆಗೆ ಮುಂಚೆಯೇ ಇಪ್ಪತ್ತೆರಡು ಸಾವಿರ ಇಪ್ಪತ್ತೆರಡು ದಿನಗಳೂ ಬರದೆ ಹೋಗುತ್ತಿರುವುದು ಅವನನ್ನು ಕಂಗಾಲಾಗಿಸುತ್ತಿತ್ತು. ಡಿಆರ್‌ಎನ್ ಮರೆತುಹೋಗಿ ಸ್ಟ್ಯಾಟಿಸ್ಟಿಕ್ಸ್ ಜೀವನ ಪಾಠ ಹೇಳುತ್ತಿತ್ತು. ಅವನು ಅದನ್ನೇ ಕಲಿಸುತ್ತಿದ್ದ. ಮಕ್ಕಳು ಕಣ್ಣರಳಿಸಿ ನೋಡುತ್ತಿದ್ದರು.

ಇದೇ ಹೊತ್ತು ಯುಜಿಸಿಯವರು ಪಿಎಚ್.ಡಿ ಇನ್ನು ಮುಂದಕ್ಕೆ ಕಡ್ಡಾಯ ಎಂದಿದ್ದರು. ಹಾಗೆ ಪಿಎಚ್.ಡಿ ಮಾಡಿದ್ದಾದರೆ ಐದು ಸಾವಿರ ಇನ್ಸೆಂಟಿವ್ ಹೆಚ್ಚಿಗೆ ಕೊಡಲಾಗುವುದು ಎಂದು ಕಾಲೇಜಿನ ಮ್ಯಾನೇಜ್ಮೆಂಟ್ ಹೇಳಿದಾಗ ಪ್ರಣತಿ ಸುಮ್ಮನೆ ನಕ್ಕಿದ್ದಳು. ಆದರೆ, ಆರಾಧ್ಯ ಕೊಂಚ ನಿರಾಳವಾಗಿದ್ದನಾದರೂ ಪಿಎಚ್.ಡಿ ಬೇಟೆ ಕಷ್ಟದ ಸಂಗತಿ ಅನಿಸಿತ್ತು. ಅದೇ ಹೊತ್ತು ವರದರಾಜಪ್ಪನವರು 'ಎರಡು ಸೀಟ್ ಕೊಡಿಸ್ತೀನಿ' ಅಂದಾಗ ಖಾಲಿಕೊಡ ಒಳಗೊಳಗೇ ಹಲವು ಲೆಕ್ಕಾಚಾರಗಳನ್ನು ಹಾಕಿಕೊಳ್ಳಲು ಆರಂಭಿಸಿತ್ತು. ಪ್ರಣತಿ ಪಿಎಚ್.ಡಿ ಮಾಡಲು ಒಪ್ಪದಿದ್ದರೆ ಕಥೆ ಏನು ಎಂದು ಯೋಚಿಸುವಾಗ ಡಿಆರ್‌ಎನ್ ಮತ್ತೆ ನೆನಪಿಗೆ ಬಂದು ಸಮಾಧಾನ ಮಾಡಿದಂತೆ ಭಾಸವಾಗಿತ್ತು.

## 3

'ಮಾತಾಡಿದ್ದೀನಿ. ಇಬ್ಬರಿಗೂ ಸೀಟ್ ಸಿಕ್ತಿರೋದು ನಿಜಕ್ಕೂ ಗೋಲ್ಡನ್ ಚಾನ್ಸ್' ಅಂದ ಅರಾಧ್ಯನ ಮಾತಿಗೆ ಪ್ರಣತಿ ನಕ್ಕಳು. ಆರಾಧ್ಯ ಮತ್ತೊಮ್ಮೆ ಪ್ರಣತಿ ಎದುರು ಖಾಲಿಕೊಡವೇ ಆಗಿ ಅದರ ಖಾಲಿ ಭಾವ